ದೊಡ್ಡಮ್ಮ ತುಂಬಾ ಸಡಗರದಿಂದ ಹೇಳಿದಾಗ ಅಮ್ಮನ ಮುಖ ಸೂರ್ಯಕಾಂತಿ ಹೂವಿನಂತೆ ಅರಳಿದುದು ನನಗೆ ಕಾಣಿಸದೇ ಇರಲಿಲ್ಲ. ಅಪ್ಪನ ಮುಖದ ಒಂದು ಪಾರ್ಶ್ವದಲ್ಲಿಯೇ ಆನಂದದ ಲಕ್ಷಣಗಳು ಮೂಡಿ ಅವರು ಅಲ್ಲಿಯೇ ಗೋಡೆಗೊರಗಿ ನಿಂತಿದ್ದ ನನ್ನತ್ತ ನೋಡಿದರು.

ಮರುಕ್ಷಣವೇ ಅಮ್ಮ, ಅಕ್ಕಾ.. ನಮ್ಮ ಮನೆಯ ವಿಷಯವೆಲ್ಲಾ ಅವರಿಗೆ ತಿಳಿದಿದೆಯೇನಕ್ಕಾ.. ಎಂದು ಕ್ಷೀಣದನಿಯಲ್ಲಿ ಕೇಳಿದ್ದು ಯಾಕೆಂದು ನನಗೂ ತಿಳಿಯಿತು. ಅಪ್ಪನಿಗೂ ತಿಳಿಯಿತು. ಅವರು ಕುಳಿತಲ್ಲಿಯೇ ತಲೆತಗ್ಗಿಸಿದರು.

ಎಲ್ಲವನ್ನೂ ತಿಳಿಸಿದ್ದೇವೆ.. ಅದರ ಬಗ್ಗೆ ನೀನೇನೂ ಚಿಂತಿಸಬೇಡ.. ಎಂದು ಸೂಕ್ಷ್ಮವಾಗಿ ದೊಡ್ಡಮ್ಮ ಉತ್ತರಿಸಿದರು.

ಮದುವೆಯನ್ನೂ ಅವರೇ ಮಾಡಿಕೊಳ್ಳುತ್ತಾರಂತೆ.. ಅವರದೇನೂ ಬೇಡಿಕೆಗಳಿಲ್ಲ.. ನೀವಿಬ್ಬರೂ ಒಪ್ಪಿದರೆ ಅವರು ಬಂದು ಹುಡುಗಿಯನ್ನು ನೋಡಿದಂತೆ ಮಾಡುವ ಶಾಸ್ತ್ರವೊಂದೇ ಬಾಕಿ ಉಳಿದಿರುವುದು.. ದೊಡ್ಡಮ್ಮ ಎಲ್ಲವೂ ಆಗಲೇ ನಿರ್ಧಾರವಾಗಿದೆಯೆನ್ನುವಂತೆ ಹೇಳಿದರು.

ನಿಮಗೆ ಸಂಬಂಧ ಒಪ್ಪಿಗೇನಾ.. ದೊಡ್ಡಪ್ಪ ಅಪ್ಪನಿಗೆ ಕಿವುಡು ಎನ್ನುವಂತೆ ಅವರತ್ತ ನೋಡಿ ಜೋರಾಗಿ ಕೇಳಿದರು. ಅಪ್ಪ ತಲೆಯಲ್ಲಾಡಿಸಿ ಆಯ್ತು.. ಆಯ್ತು.. ಎಂದು ಮಕ್ಕಳಂತೆ ತೊದಲಿದರು. ಅದಾದ ಮೇಲೆ ಅಮ್ಮ, ದೊಡ್ಡಪ್ಪ ದೊಡ್ಡಮ್ಮನೊಂದಿಗೆ ತುಂಬಾ ಉತ್ಸಾಹ, ಉಲ್ಲಾಸಗಳಿಂದ ಮಾತನಾಡಿದಳು. ಅವಳ ದನಿಯಲ್ಲಿ ಅವರ ಬಗ್ಗೆ ಇನ್ನಿಲ್ಲದ ಕೃತಜ್ಞತೆಯೊಂದು ವ್ಯಕ್ತವಾಗಿತ್ತು.

ಮದುವೆಯಾಗುವವಳು ನಾನು. ಆದರೆ ನನ್ನ ಅಭಿಪ್ರಾಯವನ್ನು ಒಬ್ಬರೂ ಕೇಳಿಲಿಲ್ಲ. ನಾನು ಮದುವೆಯ ಮಾರುಕಟ್ಟೆಯಲ್ಲಿ ಮಾರಾಟವಾದ ವಸ್ತುವಾಗಿದ್ದೆ. ನನ್ನ ಸುಂದರವಾದ ದೇಹಕ್ಕೆ ಒಳ್ಳೆಯ ಬೆಲೆಯೇ ಸಿಕ್ಕಿತ್ತು. ಅಷ್ಟೊತ್ತಿಗಾಗಲೇ ನನ್ನ ಭಗ್ನಪ್ರೇಮದ ಕುರುಹುಗಳು ನನ್ನ ಮನಸ್ಸಿನಿಂದ ಮರೆಯಾಗಿದ್ದವು. ನನ್ನ ಮುಂದಿನ ಜೀವನದ ಬಗ್ಗೆ ನನಗೆ ಸ್ಪಷ್ಟವಾದ ಗುರಿಗಳಿರಲಿಲ್ಲ. ಇಷ್ಟವೋ, ಕಷ್ಟವೋ ಒಂದನ್ನೂ ನಾನು ಯೋಚಿಸುವ ಸ್ಥಿತಿಯಲ್ಲಿರಲಿಲ್ಲ. ಸದ್ಯಕ್ಕೆ ಅಮ್ಮಅಪ್ಪನ ನೆಮ್ಮದಿ ನನ್ನ ಗುರಿಯಾಗಿತ್ತು. ಮೊದಲೇ ಜೀವನದಲ್ಲಿ ಸಾಕಷ್ಟು ಹೊಡೆತವನ್ನು ತಿಂದು ನಲುಗಿ ಹೋಗಿದ್ದರು. ಅವರ ಇಚ್ಛೆಗೆ ವಿರುದ್ಧವಾಗಿ ನಡೆಯುವ, ಅಥವಾ ನಾನು ಮದುವೆಯಾಗದೇ ಉಳಿಯುವ ನಿರ್ಧಾರ ಮಾಡಿದ್ದೇನೆಂದು ತಿಳಿಸುವ ಧೈರ್ಯ ನನ್ನಲ್ಲಿರಲಿಲ್ಲ. ಅವರು ಹೇಳಿದಂತೆ ಕೇಳಿ ಅವರಿಗೆ ಸಂತೋಷವಾಗುವಂತೆ ನಡೆದುಕೊಳ್ಳುವುದನ್ನು ಬಿಟ್ಟು ನನಗೆ ಬೇರೆ ದಾರಿಗಳೇ ಇರಲಿಲ್ಲ.

ದೊಡ್ಡಮ್ಮ ಹೋಗುವಾಗ ಮತ್ತೆ ನಮ್ಮ ಹೇಮಾ ತುಂಬಾ ಅದೃಷ್ಟವಂತೆ.. ಎಂದು ನನ್ನನ್ನು ನೋಡಿ, ನನ್ನ ಬೆನ್ನು ತಟ್ಟಿ ಹೋದರು. ಅವರ ನೋಟದಲ್ಲಿ ನಿನ್ನ ಯೋಗ್ಯತೆಗೆ ಮೀರಿದ ಸಂಬಂಧವೇ ದೊರಕಿದೆ ಎನ್ನುವ ಭಾವವಿತ್ತು.

ಅದೊಂದು ದಿನ ದೊಡ್ಡಮ್ಮ ಬೆಳಿಗ್ಗೆಯೇ ನಮ್ಮ ಮನೆಗೆ ಬಂದವರು ಅವರು ನಾಳೆ ಬೆಳಿಗ್ಗೆ ಒಂಬತ್ತು ಗಂಟೆಗೆ ಹೇಮಾಳನ್ನು ನೋಡಲು ಬರುತ್ತಾರೆ.. ಎಂದು ತಿಳಿಸಿದರು. ಅಮ್ಮನಿಗೆ ಇದ್ದಕ್ಕಿದ್ದಂತೆಯೇ ಆತಂಕ ಶುರುವಾಯಿತು. ನಡುಮನೆಯಲ್ಲಿದ್ದ ಹೊಲಿಗೆ ಯಂತ್ರವನ್ನು ಹಿತ್ತಿಲಿನಲ್ಲಿಟ್ಟು ಮನೆಯನ್ನೆಲ್ಲಾ ಸ್ವಚ್ಛಗೊಳಿಸಿದಳು. ಸಂಜೆಯ ಹೊತ್ತಿಗೆ ಎಲ್ಲಿಂದಲೋ ಐದಾರು ಪ್ಲಾಸ್ಟಿಕ್ ಚೇರುಗಳನ್ನೂ ಒಂದು ಟೀಪಾಯಿಯನ್ನೂ ತಂದು ನಡುಮನೆಯಲ್ಲಿ ಇಟ್ಟಳು. ಅಂಗಡಿಗೆ ಹೋಗಿ ಹೊಸ ಚಾಪೆ, ಸ್ಟೀಲಿನ ತಟ್ಟೆಗಳು, ಲೋಟಗಳು, ನೀರಿನ ಜಗ್ಗು, ಏನೇನೋ ಅಡಿಗೆಯ ಸಾಮಾನು, ಬಿಸ್ಕತ್ತು, ಬಾಳೆಹಣ್ಣು, ಹಾಲಿನ ಪ್ಯಾಕೆಟ್ಟು ಎಲ್ಲವನ್ನೂ ತಂದಿಟ್ಟಳು. ಬೆಳಿಗ್ಗೆ ಎದ್ದು ದೊಡ್ಡಮ್ಮ ಮತ್ತು ಅಮ್ಮ ಸ್ನಾನ ಮಾಡಿಕೊಂಡು ಅಡುಗೆ ಕೋಣೆ ಸೇರಿಕೊಂಡು ಉಪ್ಪಿಟ್ಟು, ಕೇಸರಿಭಾತು ತಯಾರಿಸಿದರು. ಅಮ್ಮ ಅಪ್ಪನಿಗೆ ಸ್ನಾನ ಮಾಡಿಸಿ ಒಳ್ಳೆಯ ಬಟ್ಟೆಗಳನ್ನು ಹಾಕಿ ಮಂಚದ ಮೇಲೆ ಕೂರಿಸಿದಳು. ಅಪ್ಪ ಮಲಗುತಿದ್ದ ಹಾಸಿಗೆಯನ್ನು ಸುತ್ತಿ ಎಲ್ಲಿಟ್ಟಿದ್ದಳೆಂದು ತಿಳಿಯಲಿಲ್ಲ. ಅಪ್ಪನದು ಆದ ಮೇಲೆ ನನ್ನದು ಶುರುವಾಯಿತು. ಬೇಗ ಬೇಗ ಸ್ನಾನ ಮಾಡಿಕೊಂಡು ಬಾ ಎಂದು ಅವಸರಿಸಿದಳು. ನಾನು ಸ್ನಾನ ಮಾಡಿಕೊಂಡು ಬಚ್ಚಲ ಮನೆಯಿಂದ ಹೊರಗೆ ಬಂದರೆ ಬಾಗಿಲಿನಲ್ಲಿಯೇ ಸೀರೆ, ರವಿಕೆ ಹಿಡಿದು ನಿಂತಿದ್ದಳು. ನಾನು ಅವುಗಳನ್ನು ಧರಿಸಿದ ಮೇಲೆ ಅವಳೇ ನನ್ನ ತಲೆ ಬಾಚಿ ಜಡೆ ಹೆಣೆದಳು. ಪೌಡರ್ ಹಚ್ಚಿಕೋ.. ಕಣ್ಣಿನ ಹುಬ್ಬುಗಳಿಗೆ ಕಾಡಿಗೆ ತೀಡಿಕೋ.. ಹೂ ಮುಡಿದುಕೋ.. ಅವರು ಏನಾದರೂ ಕೇಳಿದರೆ ನಗುತ್ತಲೇ ಉತ್ತರಿಸು.. ಎಂದೆಲ್ಲಾ ಅಲವತ್ತುಕೊಂಡಳು.

ಒಂಬತ್ತು ಗಂಟೆಯ ಹೊತ್ತಿಗೆ ದೊಡ್ಡ ಕಾರೊಂದು ನಮ್ಮ ಮನೆಯ ಬಾಗಿಲಿನ ಬಳಿ ಬಂದು ನಿಂತದ್ದನ್ನು ಕಂಡು ಅಮ್ಮ ಮೈತುಂಬಾ ಸೆರಗು ಹೊದ್ದುಕೊಂಡಳು. ಕಾರಿನ ಸದ್ದು ಕೇಳಿ ಅಪ್ಪ ಕುಳಿತಲ್ಲಿಂದ ಯಾಂತ್ರಿಕವಾಗಿ ಎದ್ದುನಿಂತರು. ಅಮ್ಮ ನನಗೆ ಅಡುಗೆ ಮನೆಯ ಒಳಗೆ ಹೋಗೆಂದು ಕೈಯ್ಯಲ್ಲಿಯೇ ಸನ್ನೆ ಮಾಡಿದಳು. ನಾನು ಒಳಗೆ ಹೋದೆ. ಅವರೆಲ್ಲಾ ಬಂದು ಒಳಗೆ ಕುಳಿತ ಮೇಲೆ ಅಮ್ಮ ಅಡುಗೆ ಕೋಣೆಗೆ ಬಂದು ಹೊಸ ಸ್ಟೀಲಿನ ತಟ್ಟೆಯಲ್ಲಿ ನೀರಿನ ಲೋಟಗಳನ್ನಿಟ್ಟು ತೆಗದುಕೊಂಡು ಹೋಗುವಂತೆ ನನಗೆ ತಿಳಿಸಿದಳು. ನಾನು ಅದನ್ನು ತೆಗದುಕೊಂಡು ಹೋಗಿ ಟೀಪಾಯಿಯ ಮೇಲಿಟ್ಟೆ. ಆಮೇಲೆ ತಿಂಡಿ, ಕಾಫಿ, ಬಾಳೆಹಣ್ಣು, ಬಿಸ್ಕತ್ತು ಎಲ್ಲವನ್ನೂ ಸರಬರಾಜು ಮಾಡಿದೆ. ಅಂದು ನನ್ನ ಗಂಡ, ಅತ್ತೆ, ನಮ್ಮ ಭಾವ, ವಾರಗಿತ್ತಿ ಮತ್ತು ದೊಡ್ಡಮ್ಮನ ಬೀಗರು (ಅವರ ಸೊಸೆಯ ತಂದೆ) ಬಂದಿದ್ದರು.

ಅಂದು ನಾನು ನನ್ನ ಗಂಡನನ್ನು ಸರಿಯಾಗಿ ನೋಡಲೇ ಇಲ್ಲ. ನೋಡಿದರೂ ಆಗುವ ಪ್ರಯೋಜನವೇನೂ ಇರಲಿಲ್ಲ. ಎಲ್ಲವೂ ಮೊದಲೇ ನಿರ್ಧಾರವಾಗಿ ಹೋಗಿತ್ತು. ಅಷ್ಟಕ್ಕೂ ಕಣ್ಣುಗಳಿಗೆ ಕಾಣಿಸುವುದು ಬಾಹ್ಯ ಸೌಂದರ್ಯ ಮಾತ್ರವಲ್ಲವೇ..?

ಆಮೇಲೆ ಮನೆಯಲ್ಲಿ ನನ್ನ ಮದುವೆಯ ಸಂಭ್ರಮ ಶುರುವಾಯಿತು. ಅಮ್ಮ ಮದುವೆಯ ಇತರ ಖರ್ಚುಗಳು ಏನೂ ಇಲ್ಲವೆಂಬುದನ್ನು ದೃಢಪಡಿಸಿಕೊಂಡು ನನ್ನ ಗಂಡನಿಗೆ ಸೂಟು ಬೂಟು, ಕತ್ತಿಗೆ ಒಂದು ಚಿನ್ನದ ಸರ, ಕೈಗೆ ವಾಚು, ಉಂಗುರ, ಒಂದು ಬ್ರೇಸ್ಲೆಟ್, ನನಗೆ ಮೂರು ರೇಷಿಮೆ ಸೀರೆಗಳು, ಮಾಂಗಲ್ಯದ ಸರ, ನಮ್ಮ ನೆಂಟರಿಗೆಲ್ಲಾ ಬಟ್ಟೆ ಬರೆ ತಂದು ನಾನು ಕೆಲಸ ಮಾಡಿ ಉಳಿಸಿದ್ದ ಹಣ, ಅಪ್ಪ ಕೆಲಸ ಮಾಡುತ್ತಿದ್ದಾಗ ನನ್ನ ಮದುವೆಗೆಂದು ದಿನವೂ ಪಿಗ್ಮಿ ಕಟ್ಟಿಕೊಂಡು ಕೂಡಿಟ್ಟಿದ್ದ ಹಣ ಎಲ್ಲವನ್ನೂ ಖರ್ಚು ಮಾಡಿ ಬರಿಗೈಯ್ಯಾದಳು. ಮದುವೆಯಾದ ಮೇಲೆ ಅಮ್ಮ ತಂದುಕೊಟ್ಟ ಸೂಟನ್ನಾಗಲೀ, ಆಭರಣಗಳನ್ನಾಗಲೀ ನನ್ನ ಗಂಡ ಒಂದು ಬಾರಿಯಾದರೂ ಧರಿಸಿದ್ದುದು ನನ್ನ ಕಣ್ಣಿಗೆ ಇಂದಿನವರೆಗೂ ಬಿದ್ದಿಲ್ಲ.

ಬೆಂಗಳೂರಿನ ಜಯನಗರದಲ್ಲಿದ್ದ ಐಷಾರಾಮಿ ಹವಾನಿಯಂತ್ರಿತ ಕಲ್ಯಾಣ ಮಂಟಪವೊಂದರಲ್ಲಿ ನಮ್ಮ ಮದುವೆ ನಡೆಯಿತು. ನಾನು ಅದಕ್ಕಿಂತ ಮುಂಚೆ ನನ್ನ ಜೀವನದಲ್ಲಿಯೇ ಅಂತಹ ಕಲ್ಯಾಣ ಮಂಟಪದ ಒಳಗೂ ಕಾಲಿಟ್ಟಿರಲಿಲ್ಲ. ಮದುವೆಯ ಹಿಂದಿನ ರಿಸೆಪ್ಷನ್ನಿನ ದಿನ ಕಾರುಗಳಿಗೆ ನಿಲ್ಲಲು ಸ್ಥಳವಿರಲಿಲ್ಲ. ಅಂದು ನನ್ನನ್ನು ಬೆಂಗಳೂರಿನ ಖ್ಯಾತ ಬ್ಯೂಟಿಷಿಯನ್ ಒಬ್ಬರು ತಮ್ಮ ತಂಡದೊಂದಿಗೆ ಶೃಂಗರಿಸಿದ್ದರು. ನನ್ನ ಮೈಮೇಲೆ ನಾನು ಹೊರಲಾರದಷ್ಟು ಆಭರಣಗಳಿದ್ದವು. ನಮ್ಮ ಮದುವೆಗೆ ಒಂದು ಕೋಟಿ ರೂಪಾಯಿ ಖರ್ಚಾಯಿತು. ರಿಸೆಪ್ಷನ್ನಿನ ದಿನ ನಿನಗೆ ಮೇಕಪ್ಪು ಮಾಡಲೆಂದೇ ಐದು ಲಕ್ಷ ರೂಪಾಯಿ ಕೊಟ್ಟಿದ್ದೇನೆ.. ಎಂದು ಅದನ್ನು ನನ್ನ ಗಂಡ ಈಗಲೂ ಹೇಳುತ್ತಿರುತ್ತಾರೆ. ಅವರ ಅಂತಹ ಮಾತುಗಳಿಗೆ ನಾನು ಏನೂ ಪ್ರತಿಕ್ರಿಯಿಸದೇ ಸುಮ್ಮನೆ ಮುಗುಳ್ನಗುತ್ತೇನೆ.

ನನ್ನ ಮದುವೆಗೆ ನನ್ನ ಸ್ನೇಹಿತೆಯೆಂದು ನಾನು ಸೀತೆಯೊಬ್ಬಳನ್ನು ಮಾತ್ರ ಕರೆದಿದ್ದೆ. ಅವಳು ಮದುವೆಗೆ ಬಂದು ಅಲ್ಲಿನ ಆಡಂಬರಗಳನ್ನು ನೋಡಿ ಬೆರಗಾಗಿ ಆ ಜನಸಾಗರದಲ್ಲಿ ನನ್ನೊಂದಿಗೆ ಏನೊಂದೂ ಮಾತನಾಡಲಾಗದೇ ಹೊರಟುಹೋಗಿದ್ದಳು. ಆಮೇಲೆ ಒಂದು ದಿನ ನಾನು ಅಮ್ಮ ಅಪ್ಪನನ್ನು ನೋಡಲೆಂದು ಊರಿಗೆ ಬಂದಾಗ ಸಿಕ್ಕಿದ್ದಳು. ಅವಳಿಗೂ ನಾನು ದೊಡ್ಡ ಶ್ರೀಮಂತ ಕುಟುಂಬದ ಸೊಸೆಯಾದೆ, ತುಂಬಾ ಅದೃಷ್ಟವಂತೆ ಎನ್ನುವ ಹೆಮ್ಮೆಯಿತ್ತು. ನನ್ನನ್ನು ಓರ್ವ ಗೆಳತಿ ಎನ್ನುವುದನ್ನು ಮರೆತು ಅದೇ ಭಾವದಿಂದಲೇ ಮಾತನಾಡಿಸಿದ್ದಳು. ನಾನು ಬೆಂಗಳೂರಿನಲ್ಲಿಯೇ ಇರುತ್ತಿಯಲ್ಲಾ.. ಒಮ್ಮೆ ಬಿಡುವು ಮಾಡಿಕೊಂಡು ಬಾ.. ನಿನ್ನೊಂದಿಗೆ ಸಾಕಷ್ಟು ಮಾತನಾಡಬೇಕು ಎಂದು ಹೇಳಿ ಈಗಿರುವ ನನ್ನ ಮನೆಯ ವಿಳಾಸ ಬರೆದುಕೊಟ್ಟಿದ್ದೆ. ಆದರೆ ಅವಳು ಇದುವರೆಗೂ ಒಮ್ಮೆಯೂ ಬಂದಿಲ್ಲ..

ಮದುವೆ ಮುಗಿದ ಮೇಲೆ ನನ್ನ ಜೊತೆ ನಮ್ಮ ಮನೆಗೆ ಬಂದ ನನ್ನ ಗಂಡ ಯಾಕೋ ಏನೋ ಕ್ಷಣ ಕ್ಷಣಕ್ಕೂ ಚಡಪಡಿಸುತ್ತಿದ್ದರು. ಅವರ ದುಬಾರಿ ಕಾರನ್ನು ನಿಲ್ಲಿಸಲು ನಮ್ಮ ಮನೆಯ ಮುಂದೆ ಸರಿಯಾದ ಜಾಗವಿರಲಿಲ್ಲವೆಂದು ಪರದಾಡುತ್ತಿದ್ದರು. ಆಮೇಲೆ ಅಮ್ಮನೇ ತರಾತುರಿಯಿಂದ ಓಡಾಡಿ ಅವರ ಕಾರು ನಿಲ್ಲಿಸಲು ಜಾಗ ಹುಡುಕಿ ಕೊಟ್ಟಿದ್ದಳು. ಕಾರಿನ ಡ್ರೈವರ್ ಅದನ್ನು